**ದಿ.೨೧-೦೨-೨೦೨೨ ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ೪ ನೇ ಪ್ರತಿವಾದಿ ಪರ ಶ್ರೀ.ಸಿ.ಎಸ್.ಎಸ್ ವಕೀಲರಿಂದ.**

ನನ್ನ ತಂದೆ ಬಸಪ್ಪ ದಿನಾಂಕಃ೦೫/೦೬/೨೦೧೫ ರಂದು ಮರಣ ಹೊಂದಿರುತ್ತಾರೆ. ನನ್ನ ತಂದೆ ಮರಣ ಹೊಂದುವಾಗ ಅವರ ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದುವಾಗ ಅವರಿಗೆ ಬುದ್ದಿ ಸ್ಥಿಮೀತದಲ್ಲಿ ಎಂದರೆ ಸರಿಯಲ್ಲ. ನನ್ನ ತಂದೆ ಎಲ್ಲಾ ಕೆಲಸಗಳನ್ನು ಸ್ವತಂತ್ರವಾಗಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಕರಾರಿನಲ್ಲಿ ನನ್ನ ತಂದೆಗೆ ಆರೋಗ್ಯ ಸರಿ ಇಲ್ಲ ಎಂದು ಬರೆಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರ ದಾಖಲಾತಿಗಳನ್ನು ನನ್ನ ತಂದೆಯ ಆರೋಗ್ಯ ಸ್ಥಿತಿ ತೋರಿಸಲು ಹಾಜರುಪಡಿಸಿದ್ದೇನೆ ಎಂದರೆ ಸರಿ. ನನ್ನ ತಂದೆಗೆ ಸ್ಟ್ರೋಕ್ ಆಗಿ ಆತ ಸ್ವತಂತ್ರವಾಗಿ ಕೆಲಸ ಮಾಡುತ್ತಿರಲಿಲ್ಲ ಎಂದು ನಾನು ಹಾಜರುಪಡಿಸಿರುವ ದಾಖಲಾತಿಯಲ್ಲಿ ತೋರಿಸಿರುತ್ತಾರೆ. ವೈದ್ಯರು ನೀಡಿರುವ ಪ್ರಮಾಣ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾವು ತಂದೆಯನ್ನು ಶಿವಮೊಗ್ಗದ ಮೆಗನ್ ಆಸ್ಪತ್ರೆಯಲ್ಲಿ ತೋರಿಸಿದ್ದೇವು. ನಂತರ ತಂದೆಯನ್ನು ದಿನಾಂಕಃ೨೯/೦೫/೨೦೧೫ ರಂದು ಆಸ್ಪತ್ರೆಗೆ ದಾಖಲು ಮಾಡಿದ್ದು ಅವರು ದಿನಾಂಕಃ೦೫/೦೬/೨೦೧೫ ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆಯನ್ನು ಆಸ್ಪತ್ರೆಗೆ ದಾಖಲು ಮಾಡುವಾಗ ಆತನಿಗೆ ಹೃದಯಗಾತ ಮತ್ತು ಸಪ್ಟೀಕ್ ಶಾಕ್ ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಗೆ ಕಾಲಿನಲ್ಲಿ ಗ್ಯಾಂಗ್ ರೀನ್ ರೀತಿ ಆಗಿದ್ದು ಅದು ಸಪ್ಟೀಕ್ ಶಾಕ್ ಆಗಿರುತ್ತದೆ. ನನ್ನ ತಂದೆ ಮಧುಮೇಹ ಕಾಯಿಲೆಯಿಂದ ಬಳಲುತ್ತಿದ್ದ ಕಾರಣ ಆತನಿಗೆ ಗ್ಯಾಂಗ್ ರೀನ್

ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವೈದ್ಯಕೀಯ ದಾಖಲಾತಿಯಲ್ಲಿ ನನ್ನ ತಂದೆ ಬುದ್ದಿ ಸ್ಥಿಮೀತವಾಗಿದೆ ಎಂದು ಬರೆದಿಲ್ಲ ಎಂದರೆ ಸಾಕ್ಷಿ ಅವರಿಗೆ ೮೦ ವರ್ಷ ವಯಸ್ಸಾಗಿದ್ದು ಅವರಿಗೆ ಅರುಳು ಮರುಳು ಆರಿದೆ ಎಂದು ಹೇಳುತ್ತಾರೆ. ನನ್ನ ತಂದೆಗೆ ಕಾಲಿನಲ್ಲಿ ನರರೋಗದ ತೊಂದರೆ ಇತ್ತು ಎಂದರೆ ಸರಿ. ನನ್ನ ತಂದೆಗೆ ನರರೋಗದ ತೊಂದರೆ ಇದ್ದ ಕಾರಣ ಆತ ಓಡಡುತ್ತಿರಲ್ಲಿ ಎಂದರೆ ಸಾಕ್ಷಿ ನನ್ನ ತಂದೆಗೆ ಕೇವಲ ಸ್ಟ್ರೋಕ್ ಆಗಿತ್ತು ಎಂದು ಹೇಳುತ್ತಾರೆ. ಸ್ಟ್ರೋಕ್ ನನ್ನ ತಂದೆಯ ಎಡಭಾಗಕ್ಕೆ ಆಗಿತ್ತು. ಆಸ್ಪತ್ರೆ ಪ್ರಮಾಣ ಪತ್ರದಲ್ಲಿ ನನ್ನ ತಂದೆಗೆ ಎಡಭಾಗಕ್ಕೆ ಸ್ಟ್ರೋಕ್ ಆಗಿದೆ ಎಂದು ತೋರಿಸಿಲ್ಲ ಎಂದರೆ ನನ್ನ ತಂದೆಯನ್ನು ಚಂದ್ರಪ್ಪ ಅವರು ತನ್ನ ಮನೆಗೆ ಕರೆದುಕೊಂಡು ಬರುತ್ತೇನೆ ಎಂದು ಹೇಳಿ ಆಸ್ಪತ್ರೆಗೆ ದಾಖಲು ಮಾಡಿ ಆಸ್ಪತ್ರೆಯ ದಾಖಲಾತಿಯನ್ನು ಸ್ರಷ್ಟಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ತಂದೆಗೆ ಪೆರಿಫೆರಲ್ ವ್ಯಾಸ್ಕೂಲರ್ ಕಾಯಿಲೆ ಆಗಿತ್ತು ಎಂದರೆ ಸರಿಯಲ್ಲ. ನನ್ನ ತಂದೆಗೆ ಪೆರಿಫೆರಲ್ ವ್ಯಾಸ್ಕೂಲರ್ ಕಾಯಿಲೆ ಆಗಿದ ಕಾರಣ ಸಬ್ ರಿಜಿಸ್ಟರ್ ಅವರಿಗೆ ಅರ್ಜಿಯನ್ನು ಸಲ್ಲಿಸಿ ವಿಲ್ ಅನ್ನು ಮನೆಯಲ್ಲೇ ನೊಂದಣಿ ಮಾಡಿಕೊಡಿ ಎಂದು ಮನವಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಆ ರೀತಿ ಆದ ಕಾರಣ ಸಬ್ ರಿಜಿಸ್ಟರ್ ಮನೆಗೆ ಬಂದು ನನ್ನ ತಂದೆಯ ಪೋಟೋ ಪಡೆದುಕೊಂಡು ವಿಲ್ ಅನ್ನು ರಿಜಿಸ್ಟರ್ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಬ್ ರಿಜಿಸ್ಟರ್ ನೀಡಿದ ಹಿಂಬರಹ ಹಾಗೂ ನಾನು ಸಲ್ಲಿಸಿದ ಅರ್ಜಿಯನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ ಎಂದರೆ ಸರಿ.

ದಾವ ಐಟಂ ನಂ.೧ ಮತ್ತು ೨,೪ ರ ಆಸ್ತಿಗೆ ಸಂಬಧಿಸಿದಂತೆ ವಿಲ್ ಬರೆಯಲಾಗಿದೆ ಎಂದರೆ ಸರಿ. ವಿಲ್ ನಲ್ಲಿ ನನ್ನ ತಂದೆ ದಾವ ಐಟಂ ನಂ.೧ ಮತ್ತು ೨,೪ ರ ಆಸ್ತಿಗಳನ್ನು ಹಂಚಿರುತ್ತಾರೆ

ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಮನಾವಾಗಿ ಹಂಚಿರುವುದಿಲ್ಲ ಎಂದು ನುಡಿಯುತ್ತಾರೆ. ೧ ನೇ ಪ್ರತಿವಾದಿಯವರು ಬೆಂಗಳೂರಿನಲ್ಲಿ ವಾಸವಾಗಿದ್ದರು ಎಂದರೆ ಸರಿ. ೨ ನೇ ಪ್ರತಿವಾದಿಯವರು ಮುದ್ರೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ನನ್ನ ತಂದೆಯ ಯೋಗ ಕ್ಷೇಮವನ್ನು ಮೊದಲಿನಿಂದಲೂ ೪ ನೇ ಪ್ರತಿವಾದಿಯವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಗೆ ತನ್ನ ಆಸ್ತಿಯ ಮೇಲೆ ಮರಣ ಶಾಸನ ಬರೆಯುವ ಹಕ್ಕಿತು ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿ ಎಂದು ನಾವು ಹೇಳುವ ಕಾರಣಕ್ಕೆ ನನ್ನ ತಂದೆಗೆ ಮರಣ ಶಾಸನ ಬರೆಯುವ ಹಕ್ಕಿತು ಎಂದರೆ ಸಾಕ್ಷಿ ನನ್ನ ತಂದೆ ತಾಯಿಗೆ ಬರುವ ಪಾಲಿಗೆ ಸಂಬಂಧಿಸಿದಂತೆ ಮರಣ ಶಾಸನ ಬರೆಯಲು ಹಕ್ಕಿತು ಎಂದು ನುಡಿಯುತ್ತಾರೆ.

ಮಂಗೇನಹಳ್ಳಿಯ ಜಮೀನಿನ ಆಸ್ತಿಯ ಖಾತೆಯು ೨೦೦೪ ರಲ್ಲಿ ತಾಯಮ್ಮ ಯಾನೆ ಗೌರಮ್ಮ ಅವರ ಹೆಸರಿಗೆ ಬದಲಾವಣೆ ಆಗಿತ್ತು ಎಂದರೆ ಸರಿ. ಸದರಿ ಜಮೀನು ಒಟ್ಟು ೩ ಎಕರೆ ೧೭ ಗುಂಟೆ ಎಂದರೆ ಸರಿ. ಅದು ಖುಷ್ಕಿ ಜಮೀನು ಎಂದರೆ ಸರಿ. ಖುಷ್ಕಿ ಜಮೀನುಗಳಲ್ಲಿ ಮಳೆಯಾದರೆ ಮಾತ್ರ ಬೆಳೆಯಾಗುತ್ತದೆ ಎಂದರೆ ಸರಿ. ೨೦೦೪-೨೦೦೫ ನಲ್ಲಿ ಸದರಿ ಜಮೀನ್ ಅಲ್ಲಿ ಯಾವುದೇ ಬೆಳೆ ಸರಿಯಾಗಿ ಆಗದೆ ಇರುವ ಕಾರಣ ಸದರಿ ಜಮೀನನ್ನು ತಾಯಮ್ಮ ಯಾನೆ ಗೌರಮ್ಮ ಹಸರಿಗೆ ಬದಲಾವಣೆ ಮಾಡಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಬೆಳೆ ಆಗುತ್ತಿತ್ತು ಆ ಕಾರಣದಿಂದ ಬಿಟ್ಟುಕೊಟ್ಟಿರುವುದು ಸುಳ್ಳು ಎಂದು ಹೇಳುತ್ತಾರೆ. ೧೯೭೫ ನಲ್ಲೇ ಸದರಿ ಜಮೀನಿನ ಸ್ವಾಧೀನವನ್ನು ತಾಯಮ್ಮ ಯಾನೆ ಗೌರಮ್ಮನಿಗೆ ಕೊಟ್ಟಿದ್ದರು.

ಎ ಸಿ ನ್ಯಾಯಲಯದಲ್ಲಿ ನನ್ನ ತಂದೆ ವಕೀಲರನ್ನು ಇಟ್ಟುಕೊಂಡು ಕೇಸ್ ನಡೆಸಿದ್ದರು ಎಂದರೆ ಸಾಕ್ಷಿ ನನ್ನ ತಂದೆ ಹೊರಗಡೆ ಹೆಚ್ಚು ಬರುವುದಿಲ್ಲ ಎಂದು ನುಡಿಯುತ್ತಾರೆ. ಎ ಸಿ ನ್ಯಾಯಲಾಯದಲ್ಲಿ ನನ್ನ ತಂದೆ ಕೇಸ್ ದಾಖಲು ಮಾಡಿದ್ದು ಅದರ ದಾಖಲಾತಿಯನ್ನು ನಾನು ನೋಡಿರುತ್ತೇನೆ. ಸದರಿ ಕೇಸ್ ಮಂಗೇನಹಳ್ಳಿಗೆ ಸಂಬಂಧಿಸಿದ್ದು ಎಂದರೆ ಸರಿ. ಎ.ಸಿ ನ್ಯಾಯಲಾಯದಲ್ಲಿ ಕೇಸ್ ತೀರ್ಮಾನವಾದ ನಂತರ ನನ್ನ ತಂದೆ ಅದಕ್ಕೆ ಸಂಬಂಧಿಸಿದಂತೆ ಬೇರೆ ಕೇಸ್ ಹಾಕಿರುವುದು ಗೊತ್ತಿಲ್ಲ. ನಾನು ಎ.ಸಿ ನ್ಯಾಯಲಾಯದಿಂದ ದಾಖಲಾತಿಗಳನ್ನು ಈ ಕೇಸ್ ದಾಖಲು ಮಾಡುವಾಗ ಪಡೆದುಕೊಂಡಿರುತ್ತೇನೆ. ಸದರಿ ಕೇಸಿನ ಮೇಲೆ ನಾನಗಲೀ ಅಥವಾ ನನ್ನ ಸಹೋದರರಾಗಲಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಸದರಿ ಆಸ್ತಿ (ಮಂಗೇನಹಳ್ಳಿ) ಇದರ ಸ್ವಾಧೀನದಲ್ಲಿ ತಾಯಮ್ಮ ಇದ್ದರೆ ಎಂದರೆ ಸರಿ. ನಿಡಿ-೨೮ ಮತ್ತು ೨೯ ಐಟಂ ನಂ.೨ ರ ಆಸ್ತಿಗೆ ಸಂಬಂಧಿಸಿದ ದಾಖಲಾತಿ ಎಂದರೆ ಸರಿ. ನಿಡಿ-೨೮ ಮತ್ತು ೨೯ ಅನ್ನು ಈ ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಾದ ನಂತರ ಪಡೆದುಕೊಂಡಿದ್ದೇನೆ ಎಂದರೆ ಸರಿ. ನಮ್ಮ ಮನೆಯ ಯಜಮಾನರು ನನ್ನ ತಂದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲಿಗೆ ಸಮಯಾ ಕೇಳಿದ್ದು ಸಮಯ ನೀಡಿ ಮುಂದೂಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾ.ದಂ. ರವರು, ತರೀಕೆರೆ.